ವಿಶ್ವ ಕನ್ನಡ ಸಮ್ಮೇಳನ ೨೦೧೧- ಬೆಳಗಾಂ

"ಕೃಷಿ ಸಾಧನೆ – ಸವಾಲು"

ಡಾ|| ಜಿ.ಕೆ. ವೀರೇಶ್ – ವಿಶ್ರಾಂತ ಕುಲಪತಿ – ಕೃಷಿ ವಿ.ವಿ. ಬೆಂಗಳೂರು

ಕೃಷಿ ಸಾಧನೆ – ಸವಾಲು ನಿರಂತರ. ಪ್ರಪಂಚದಾದ್ಯಂತ ಕೃಷಿಯ ಸಾಧನೆಯಿಂದ ಹಲವಾರು ಸಂಸ್ಕೃತಿಗಳು ಉದ್ಭವಿಸಿ, ವಿಕಾಸಗೊಂಡು ವಿನಾಶವಾಗಿರುವುದು ಚರಿತ್ರಾರ್ಹ, ಆದರೆ ಕೃಷಿ ಒಂದು ಕಲೆಯಾಗಿ ಜನ ಜೀವನದ ಅವಿಭಾಜ್ಯ ಅಂಗವಾಗಿದ್ದು ಯಾವಾಗ, ಎಲ್ಲಿ, ಹೇಗೆ, ಅನ್ನುವುದಕ್ಕೆ ಪುರಾವೆಗಳು ದೊರಕಿಲ್ಲ ಏಕೆಂದರೆ ಬೇರೆ ಪಳೆಯುಳಿಕೆಗಳು ಭೂಗರ್ಭದಲ್ಲಿ ಅಡಕವಾಗಿದ್ದು ಅದರ ಪೂರ್ವ ಚರಿತ್ರೆಯನ್ನು ಸೂಚಿಸುವಂತೆ, ಯಾವುದೇ ದೇಶದ, ಜಾಗದ, ಕೃಷಿಯ ಕುರುಹು ಶಾಶ್ವತವಾಗಿರುವುದಿಲ್ಲ. ಪಾಳು ಬಿದ್ದ ಕೃಷಿ ಕೇವಲ ಕೆಲವು ದಶಕಗಳಲ್ಲಿ ಕುರುಹು ಇಲ್ಲದಂತೆ ಪ್ರಕೃತಿಯಲ್ಲಿ ಲೀನವಾಗಿ ಹೋಗುತ್ತದೆ ಆದರೂ ಕೆಲವು-ಪುರಾತನ ವಸ್ತುಗಳ ಪುರಾವೆಗಳಿಂದ ಮಾನವ ತನ್ನ ಅಲೆಮಾರಿ ಜೀವನವನ್ನು ತ್ಯಜಿಸಿ, ಒಂದೆಡೆ ನೆಲಸಿ ಕೃಷಿಯನ್ನು ಆರಂಭಿಸಿರುವ ಕಾಲವನ್ನು ಊಹಿಸಬಹುದು. ಉದಾಹರಣೆಗೆ ಆಫ್ರಿಕ ಮತ್ತು ಮಲೇಷಿಯಗಳಲ್ಲಿ ದೊರೆತಿರುವ ಕೈ ಕೊಡಲಿ ಕ್ರಮವಾಗಿ 1.6 ಮತ್ತು 1.83 ದಶಲಕ್ಷ ವರುಷಗಳ ಹಿಂದಿನದೆಂದು ಹೇಳಲಾಗಿದೆ, ಅಂದರೆ ಕೃಷಿ ಉಪಕರಣಗಳಲ್ಲಿ ಕೊಡಲಿ, ಕತ್ತಿ, ಕುಡುಗೋಲು ಮೊದಲಿನವು, ಉತ್ತುಬಿತ್ತುವುದಕ್ಕೆ ಮುಂಚೆ ಸ್ವಾಭಾವಿಕವಾಗಿ ದೊರೆಯುತ್ತಿದ್ದ ಹಣ್ಣುಹಂಪಲು, ಗೆಡ್ಡೆ ಗೆಣಸು, ಕಾಡುಪ್ರಾಣಿಗಳು,ಹಕ್ಕಿ ಪಕ್ಷಿ ಅವರ ಆಹಾರವಾಗಿತ್ತು. ಅವುಗಳನ್ನು ಸಂಸ್ಕರಿಸಲು ಉಪಯೋಗಿಸುತ್ತಿದ್ದ ಉಪಕರಣಗಳು ಮೇಲಿನವು.

ನೇಗಿಲು ಮಾನವ ಮಾಡಿದ ಮೊದಲ ಕೃಷಿ ಉಪಕರಣ. ಆದರೆ ಇದನ್ನು ಎಲ್ಲಿ ಯಾರು ಮೊದಲು ಮಾಡಿದರೆನ್ನುವುದಕ್ಕೆ ಸಾಕ್ಷಿ ದೊರೆತಿಲ್ಲ. ಹೀಗೆಯೆ ಚಕ್ರವನ್ನು ಕಂಡು ಹಿಡಿದವರು ಯಾರು? ಎಲ್ಲಿ ಅನ್ನುವುದೂ ತಿಳಿಯದು. ದ್ವಾಪರ ಯುಗದಲ್ಲಿ ಬಲರಾಮನು ನೇಗಿಲನ್ನು ಆಯುಧವಾಗಿ ಉಪಯೋಗಿಸುತಿದ್ದನೆಂದು, ಶ್ರೀ ಕೃಷ್ಣನು ಸುದರ್ಶನ ಚಕ್ರವನ್ನು ಆಯುಧವಾಗಿ ಉಪಯೋಗಿಸುತಿದ್ದನೆಂದು ಕೇಳಿದ್ದೇವೆ. ಶ್ರೀ ಕೃಷ್ಣನಿಗಿಂತ ಮುಂಚಿತವಾಗಿಯೇ ಚಕ್ರ ಇದ್ದಿರಬೇಕು, ಏಕೆಂದರೆ ರಥ ಚಕ್ರ ಅನಾದಿ. ನೇಗಿಲು ಕೂಡ ಬಲರಾಮನಿಗಿಂತ

ಮುಂಚಿತವಾಗಿಯೇ ಇತ್ತು ಅನ್ನುವುದಕ್ಕೆ ತ್ರೇತ್ರಾಯುಗದಲ್ಲಿ ಸೀತೆ ನೇಗಿಲ ಕುಳದಲ್ಲಿ ಸಿಕ್ಕಿದವಳೆಂದು ಹೇಳಿದೆ.

ಹತ್ತೊಂಬತ್ತು-ಇಪ್ಪತನೆಯ ಶತಮಾನದಲ್ಲಿ ದೊರೆತಿರುವ ಸಾಕ್ಷಾಧಾರಗಳಿಂದ ಹತ್ತು-ಹದಿನೈದು ಸಾವಿರ ವರುಷಗಳ ಈಚಿನ ಕೃಷಿ ಸಾಧನೆಗಳನ್ನು ಗುರುತಿಸಬಹುದು. ಜೋರ್ಡಾನ್ ನಲ್ಲಿ ಹನ್ನೊಂದು ಸಾವಿರದ ಮುನ್ನೂರು ವರುಷಗಳ ಹಿಂದಿನದೆಂದು ಹೇಳುವ ಧಾನ್ಯ ಸಂಗ್ರಹಿಸುವ ಕಣಜವೊಂದು ದೊರೆತಿದೆ. ಪೆರು ದೇಶದಲ್ಲಿ ಇನ್ಕ ಸಂಸ್ಕೃತಿಯ ಗುಡ್ಡಗಾಡು ಜನರು ಬೇಸಾಯ ಪದ್ಧತಿಯನ್ನು ಹದಿನೈದು ಸಾವಿರ ವರುಷದ ಹಿಂದೆಯೇ ರೂಢಿಸಿಕೊಂಡಿದ್ದರು ಅನ್ನುವುದಕ್ಕೆ ಅಲ್ಲಿ ದೊರೆತಿರುವ ಗುಡ್ಡಗಾಡಿನ ಗದ್ದೆಗಳ ವಿನ್ಯಾಸ ಮತ್ತು ಆ ಗದ್ದೆಗಳಿಗೆ ದೂರದಿಂದ ನೀರನ್ನು ತರುತ್ತಿದ್ದ ಕಾಲುವೆಗಳ ವಿಶ್ಲೇಷಣೆಗಳಿಂದ ತಿಳಿದಿದೆ.ಅಮೇರಿಕೆಯ ನ್ಯಾಷನಲ್ ಜಿಯಾಗ್ರಫಿ ಸಂಸ್ಥೆಯವರು ಸಂಶೋಧಿಸಿ 1926 ರಲ್ಲಿ ಪ್ರಕಟಿಸಿರುವ ದಾಖಲೆ ಗಳಿಂದ ಈ ವಿಷಯ ದೊರೆಯುತ್ತದೆ. ಈಜಿಪ್ಟಿನ ಪಿರಮಿಡ್ ಗಳಲ್ಲಿ ನೇಗಿಲಿನಂತಹ ಕೃಷಿ ಉಪಕರಣಗಳು ದೊರೆತಿವೆ. ನಮ್ಮ ಸಿಂಧೂ ಗಂಗಾನದಿ ಬಯಲು ಗಳಲ್ಲಿ ಸಮೃದ್ಧಿ ಆಹಾರ ಬೆಳೆಯುತಿದ್ದಕ್ಕೆ ಹರಪ್ಪ,ಮಹೆಂಜೊದಾರೊ ಅನ್ವೇಷಣೆಗಳಿಂದ ದೊರೆಯುತ್ತದೆ. ಸುಮಾರು ಐದು ಸಾವಿರ ವರುಷದ ಹಿಂದಿನದಿರಬಹುದೆಂದು ಶಂಕಿಸುವ ಗೋಧಿಯಂತಹ ಕಾಳುಗಳು ಇಲ್ಲಿ ದೊರೆತಿವೆ.

ಒಂದಂತೂ ಸತ್ಯ, ಯಾವುದೆ ಪ್ರದೇಶದ ಸಂಸ್ಕೃತಿ, ಕಲೆ, ವಿಜ್ಞಾನ ಉಚ್ಛಾಯ ಸ್ಥಿತಿಗೆ ಬರಬೇಕಾದರೆ ಅಲ್ಲಿ ಮೊದಲು ಕೃಷಿ ವಿಕಾಸಗೊಂಡು ಸಮೃದ್ಧಿಯಾದ ಆಹಾರ, ಕಚ್ಚಾ ವಸ್ತುಗಳ ಉತ್ಪನ್ನ, ಅದರಿಂದ ಉಡುಪು ವಸತಿಗಳ ವಿನ್ಯಾಸಗಳಾದವು, ಸಂತೃಪ್ತಿ ಕೃಷಿ ಆಧಾರಿತ ಜೀವನದ ಅಡಿಗಲ್ಲ ಮೇಲೆ ಕಲೆ, ವಿಜ್ಞಾನ ಉದ್ಭವಿಸಿದವು, ಆದ್ದರಿಂದಲೇ ನೈಲು ನದಿ ಬಯಲು, ಸಿಂಧೂ-ಗಂಗಾನದಿ ಬಯಲು ಕೃಷಿ ಇತಿಹಾಸದಲ್ಲಿ ಶಾಶ್ವತ ಸ್ಥಾನ ಗಳಿಸಿದವು.ಭಾರತ,ಚೀನಾ ದೇಶಗಳ ನಿರಂತರ ಕೃಷಿ ಸುಮಾರು ಐದು ಸಾವಿರ ವರುಷಗಳ ಇತಿಹಾಸ ಉಳ್ಳವು, ಎಫ್,ಹೆಚ್,ಕಿಂಗ್ ರವರು ಅವರ ಪ್ರವಾಸ ಕಥನವಾಗಿ ಬರೆದಿರುವ "**ನಲವತ್ತು ಶತಮಾನಗಳ ರೈತರು" (King F.H. 1926 Oxford University Press)** ಅನ್ನುವ ಪುಸ್ತಕದಿಂದ ಈ ಮಾಹಿತಿ ದೊರೆಯುತ್ತದೆ.

ಇಷ್ಟು ಪುರಾತನ ಕೃಷಿ ನಿರಂತರವಾಗಿ ಈ ಪ್ರದೇಶಗಳಲ್ಲಿ ಬೆಳೆದು ಬರುವುದಕ್ಕೆ ಒಂದು ಮುಖ್ಯ ಕಾರಣ ಸಣ್ಣ ಹಿಡುವಳಿದಾರರು ಅವರ ಮಣ್ಣಿನ ಫಲವತ್ತತೆಯನ್ನು ಕಾಪಾಡಿಕೊಂಡು ಸುಸ್ಥಿರ ಕೃಷಿಯನ್ನು ಅವಲಂಬಿಸಿದ್ದು, ಯಾವುದೇ ದೇಶದ ಸಂಪತ್ತು ಅಲ್ಲಿನ ಮಣ್ಣಿನ ಫಲವತ್ತತೆ ಮೇಲೆ ಅವಲಂಬಿಸಿದೆ. ರೈತನಿಗೆ ಇದು ಮೂಲಾಧಾರ, ಮಣ್ಣಿನ ಫಲವತ್ತತೆ ಕ್ಷೀಣಿಸಿದರೆ ಅಥವಾ ಹಾಳಾದರೆ ಮತ್ತೆಲ್ಲವೂ ಹಾಳಾದಂತೆ. ಇದಕ್ಕೊಂದು ನಿದರ್ಶನ,ಎರಡು ಸಾವಿರ ಐನೂರು ವರುಷಗಳ ಹಿಂದೆ ರೋಮ್ ನಲ್ಲಿ ನಡೆದ ಒಂದು ಘಟನೆ ಇಂದಿಗೂ ಪ್ರಸ್ತುತ, ಸುಮಾರು ಹನ್ನೊಂದು ಶತಮಾನಗಳ ತನಕ ಮಣ್ಣಿನ ಫಲವತ್ತತೆಯನ್ನು ಕಾಪಾಡಿಕೊಂಡು ಸುಸ್ಥಿರ ಕೃಷಿಯನ್ನು ಮಾಡುತ್ತಿದ್ದ ಸಣ್ಣ ಹಿಡುವಳಿದಾರರಿಂದ ಕೈ ತಪ್ಪಿಸಿ ಆ ಜಮೀನನ್ನು ದೊಡ್ಡ ಹಿಡುವಳಿದಾರರು ಅಥವಾ ಕಂಟ್ರಾಕ್ಟರುಗಳಿಗೆ ಹಸ್ತಾಂತರಿಸಿದರು (ಸರ್ವಿಯನ್ ರಿಫಾರ್ಮ್ ಕೃ.ಪೂ.578-534), ಇದರ ಉದ್ದೇಶ ಹೆಚ್ಚಿನ ದೇಣಿಗೆಯನ್ನು ಸಂಗ್ರಹಿಸುವ ದೃಷ್ಟಿಯಿಂದ, ಈ ಬಂಡವಾಳ ಶಾಹಿಗಳು ಶೀಘ್ರ ಸಂಪಾದನೆಯ ದೃಷ್ಟಿಯಿಂದ ಆಹಾರ ಬೆಳೆಗಳ ಬದಲಿಗೆ ಹೆಚ್ಚು ಲಾಭಗಳಿಸುವ ಆಲಿವ್ ಆಯಿಲ್ ಮತ್ತು ದ್ರಾಕ್ಷಿ (ದ್ರಾಕ್ಷಾ ರಸಕ್ಕಾಗಿ) ಬೆಳೆಯಲು ಪ್ರಾರಂಭಿಸಿದರು. ಹತ್ತಾರುವರುಷಗಳಲ್ಲಿ ಫಲವತ್ತತೆ ಕುಂಟಿತವಾಗಿ ಇಳುವರಿ ಕಡಿಮೆಯಾದಾಗ ಆ ವೃತ್ತಿಯನ್ನು ತೊರೆದು ಸಂಪಾದನೆಯನ್ನೆಲ್ಲಾ ಸಂಗ್ರಹಿಸಿ ದೇಶವನ್ನೆ ಬಿಟ್ಟು ಹೊಸಜಾಗ ಕಾನ್ಸ್ ಸ್ಟಾಂಟಿನೋಪಲ್ ಗೆ ವಲಸೆ ಹೋದರು. ಇದರಿಂದಾಗಿ ರೋಮ್ ದೇಶ ಆಹಾರದ ಅಭಾವದಿಂದ ತತ್ತರಿಸಿತು. ಭೂಮಿ ಮೊದಲ ಸ್ಥಿತಿಗೆ ಬರಬೇಕಾದರೆ ಒಂದು ನೂರು ವರುಷವೇ ಬೇಕಾಯಿತಂತೆ(**The History of Rome: Translated by Dickson London 1894).**

ಮೇಲಿನ ನಿದರ್ಶನ ನಮಗೆ ಅಪಾಯದ ಸೂಚಕವಾಗಿ ಕಣ್ಣು ಮುಂದೆ ಇರಬೇಕು, ಏಕೆಂದರೆ ಈಗಲೂ ನಮ್ಮಲ್ಲಿರುವ ಶೇಕಡ 65 ರಷ್ಟು ಸಣ್ಣ ಹಿಡುವಳಿ ದಾರರು ಕೃಷಿಯಿಂದ ಜೀವನ ಸಾಗಿಸಲಾರರು, ಅವರನ್ನೆಲ್ಲಾ ಒಟ್ಟು ಗೂಡಿಸಿ ಕಾಂಟ್ರಾಕ್ಟ್ ಫಾರ್ಮಿಂಗ ಮಾಡಿಸಿದರೆ ಅವರ ಪರಿಸ್ಥಿತಿ ಸುಧಾರಿಸಬಹುದೆಂದು ಕೆಲವರು ಚಿಂತಿಸುತಿದ್ದಾರೆ. ಕೈ ಬದಲಾಯಿಸುವುದರಿಂದ ಕೃಷಿ ಪ್ರಗತಿಯಾಗಲಾರದು. ಮಣ್ಣಿನ ಫಲವತ್ತತೆ ಹೆಚ್ಚಿಸಬೇಕು, ಸಮಗ್ರ ಕೃಷಿ ಅಳವಡಿಸಬೇಕು ಉತ್ಪಾದಕತೆ-ಉತ್ಪತ್ತಿ ಹೆಚ್ಚಿಸಬೇಕು, ಕೃಷಿಕರಿಗೂ – ಗ್ರಾಹಕರಿಗೂ ನಿಕಟ ಸಂಪರ್ಕ ಕಲ್ಪಿಸಬೇಕು. ಕೃಷಿ ಒಂದು ಜೀವನ ಶೈಲಿಯಾಗಿ

ಬೇರೂರಬೇಕು. ವ್ಯಾಪಾರದ ದೃಷ್ಟಿಯಿಂದ ಲಾಭ ನಷ್ಟ ಲೆಕ್ಕ ಹಾಕಿದರೆ, ಕೃಷಿ ಎಂದಿಗೂ ಲಾಭದಾಯಕವಾಗಲಾರದು ಹವ್ಯಾಸಿ ದಂಧೆಯಾದರೆ ಭೂಮಿಗೂ ಬಡತನ ಅದನ್ನು ಅವಲಂಬಿಸಿದವರಿಗೂ ಕ್ಷೇಮವಿಲ್ಲ.

ಪ್ರಸ್ತುತ ಪರಿಸ್ಥಿತಿಯಲ್ಲಿ ಸಣ್ಣ ಹಿಡುವಳಿಯೇ ಕ್ಷೇಮ. ಪರಿಕರಗಳಿಗೆ ಪರಾವಲಂಬಿಯಾಗದೆ, ಶ್ರಮಕ್ಕೆ ಬೇರೆಯವರನ್ನು ಅವಲಂವಿಸದೆ, ಬಹುತೇಕ ಅವನ ಅನ್ನ,ಹಾಲು, ಹಣ್ಣು,ತರಕಾರಿ, ಮೇವು ಉರುವಲು ಅವನ ಜಮೀನಿನಲ್ಲೇ ದೊರೆಯುವಂತೆ ಮಾಡಿ ಕೊಂಡರೆ, ಕೃಷಿಯಿಂದ ನಷ್ಟ ಅನುಭವಿಸಬೇಕಿಲ್ಲ. ಈ ಆಶ್ವಾಸನೆ, ಕಾಮನಬಿಲ್ಲಿನ ಕೊನೆಯಲ್ಲಿ ಸೇಬು ತೋರಿಸಿದಂತಲ್ಲ. ನೂರಾರು ರೈತರು ಸಮಗ್ರ ಕೃಷಿಯನ್ನು ಅಳವಡಿಸಿ ಅನುಭವಿಸುತ್ತಿರುವ ನಿದರ್ಶನದಿಂದ ಹೇಳುತ್ತಿರುವುದು. ಮಳೆ ಆಶ್ರಿತ ಪ್ರದೇಶ ದಲ್ಲಿ ಕೂಡ ಸ್ವಸ್ಥಿರ ಕೃಷಿಯನ್ನು ಮಾಡಬಹುದು. ಅದಕ್ಕೆಲ್ಲಾ ತಕ್ಕ ತಂತ್ರ ಜ್ಞಾನಗಳಿವೆ, ಮಾಡುವ ಮನಸ್ಸಿರಬೇಕು, ಅದಕ್ಕೆ ತಕ್ಕ ಸಲಹೆ, ಸಲಕರಣೆ ಒದಗಿಸುವ ವ್ಯವಸ್ಥೆ ಆಗಬೇಕು. ಕೇವಲ ಹಣ ಕೊಟ್ಟರೆ ಆಗದು, ಫಣ ತೊಡುವ ಕೃಷಿಕರನ್ನು ಸಂಘಟಿಸಬೇಕು. ಅವರನ್ನು **"ನೇಗಿಲಯೋಗಿ"** ಗಳನ್ನಾಗಿ ಪರಿವರ್ತಿಸಬೇಕು.

ಇನ್ನೂರು ವರುಷಗಳ ಹಿಂದೆ ಪ್ರಪಂಚದಾದ್ಯಂತ ಹೊರಗಿನಿಂದ ಹಣ ಕೊಟ್ಟು ಪರಿಕರಗಳನ್ನು ತಂದು ಕೃಷಿ ಮಾಡುತ್ತಿದ್ದ ಉದಾಹರಣೆಗಳಿಲ್ಲ, ~~ಇಲ್ಲ~~ ಇಲ್ಲ. ಸ್ಥಳೀಯ ಸಂಪನ್ಮೂಲಗಳಿಂದಲೇ ಎಲ್ಲವನ್ನೂ ಪೂರೈಸುತ್ತಿದ್ದರು. ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದಿಂದ ಜೆ. ಲೈಬಿಗ್ ರವರು ಪ್ರಕಟಿಸಿದ ಪುಸ್ತಕದ ಪ್ರಭಾವದಿಂದ **(Chemistry in its application and Physiology 1840)** ರಸಗೊಬ್ಬರದ ಬಳಕೆಗೆ ಚಾಲನೆ **ದೊರೆಯಿತು**. ಅದೇ ಸಮಯದಲ್ಲಿ ಇಂಗ್ಲೇಂಡಿನ **ರಾಥಮ್ ಸ್ಟಡ್ ಎಕ್ಸ್ ಪೆರಿಮೆಂಟಲ್ ಸ್ಟೇಷನ್** ಪ್ರಾರಂಭವಾಗಿ (1843) ಲೈಬಿಗ್ ರ ದಾಟಿಯಲ್ಲಿ ಸಂಶೋಧನೆ ಪ್ರಾರಂಭವಾಯಿತು.

ಯಾವುದೇ ಬೆಳೆಯ ಸತ್ವ ಹೀನತೆಯನ್ನು ಸರಿಪಡಿಸಲು ಅದರ ಎಲೆಗಳನ್ನು ಸುಟ್ಟು ಬೂದಿಯನ್ನು ವಿಶ್ಲೇಷಿದಾಗ ಕಂಡು ಬರುವ ಕಡಿಮೆ ಇರುವ ಮೂಲ ಧಾತುವನ್ನು ಬೆಳೆಗೆ ಒದಗಿಸಿದರೆ ಸರಿಪಡಿಸಬಹುದೆಂಬ ಇವರ ಸಿದ್ಧಾಂತ. ಪಾಶ್ಚಿಮಾತ್ಯ ದೇಶಗಳಲ್ಲಿ ಕೃಷಿ ವಿಜ್ಞಾನ ರಸಾಯನಿಕ ಶಾಸ್ತ್ರದ ಒಂದು ಭಾಗವಾಗಿ 1850 ರಿಂದ 1900 ರವರೆಗೆ

ಸಂಶೋಧನೆ ಬೋಧನೆ ನಡೆಯಿತು. ಬ್ರಿಟಿಷ್ ಸಾಮ್ರಾಜ್ಯವಿದ್ದೆಡೆಯಲೆಲ್ಲಾ ಈ ಪಾರಂಪರೆ ಪ್ರಾರಂಭವಾಯಿತು. ಭಾರತದಲ್ಲೂ ಕೂಡ **ಇಂಪೀರಿಯ ಅಗ್ರಿಕಲ್ಚರ್ ರೀಸರ್ಚ್ ಇನ್ಸ್ ಟ್ಯೂಟ್ (IARI)** ಬಿಹಾರದ ಪೂಸಾದಲ್ಲಿ ಪ್ರಾರಂಭವಾದದ್ದು ರಾಥಮ್ ಸ್ಟಡ್ ಎಕ್ಸ್ ಪರಿಮೆಂಟಲ್ ಸ್ಟೇಷನ್ ಮಾದರಿಯಲ್ಲೆ. ಪಾಶ್ಚಿಮಾತ್ಯ ಪದ್ಧತಿಯನ್ನೇ ಸ್ವಾತಂತ್ರ ಬಂದ ನಂತರವೂ ಮುಂದುವರಿಸಿದೆವು.ಸ್ವಾತಂತ್ರದ ನಂತರ ನಮ್ಮ ಭವಿಷ್ಯವನ್ನು ರೂಪಿಸುವಲ್ಲಿ ಎರಡು ವಿಷಯದಲ್ಲಿ ತಪ್ಪು ಹೆಜ್ಜೆ ಇಟ್ಟಿದ್ದೇವೆ. ಒಂದನೆಯದು ನಮ್ಮ ಆಹಾರ ಉತ್ಪಾದನೆಯ ಕ್ರಮದಲ್ಲಿ, ಎರಡನೆಯದು ನಮ್ಮ ಆರೋಗ್ಯವನ್ನು ರಕ್ಷಿಸುವ ಕ್ರಮದಲ್ಲಿ, ಇವೆರಡರಲ್ಲೂ ದುಬಾರಿ ದಾರಿಯನ್ನು ಅನುಸರಿಸಿದ್ದರಿಂದ ಜನಸಾಮಾನ್ಯರಿಗೆ ಆಹಾರ ಎಟುಕದಿರುವುದು ಮತ್ತು ಆರೋಗ್ಯ ಶುಶ್ರೂಷೆ ಸಿಕ್ಕದಿರುವುದು ಕಾರಣ. ಬಹುಶಃ ಹಣದುಬ್ಬರಕ್ಕೆ ಇವೆರಡೂ ಮೂಲ ಕಾರಣ ವಿರಬಹುದು.ಆರೋಗ್ಯಕ್ಕೆ ನಮ್ಮ ದೇಶೀ ತಂತ್ರ ಜ್ಞಾನ, ಆರ್ಯುವೇದ , ಯುನಾನಿ ಮುಂತಾದವನ್ನು ಪಾಶ್ಚಾತ್ಯ ಪದ್ಧತಿಯೊಂದಿಗೆ ಎಲ್ಲಾ ಆಸ್ಪತ್ರೆಗಳಲ್ಲಿ ದೊರೆಯುವುದಿದ್ದರೆ ಶುಶ್ರೂಷೆ ಇಷ್ಟು ದುಬಾರಿಯಾಗಿರುತ್ತಿರಲಿಲ್ಲ. ಹಾಗೆಯೇ ಪೂರ್ಣ ಪರಾವಂಲಂಬಿ ಕೃಷಿಯನ್ನು ಅಳವಡಿಸಿದ್ದು ಇಂದಿನ ದುಸ್ಥಿತಿಗೆ ಕಾರಣ, ಒಂದು ಸಮೀಕ್ಷೆಯ ಪ್ರಕಾರ ಶೇಕಡ 40 ರಷ್ಟು ರೈತರು ಪರ್ಯಾಯ ಉದ್ಯೋಗ ದೊರೆಯುವುದಿದ್ದರೆ ಕೃಷಿಯನ್ನು ತೊರೆಯುವುದರಲ್ಲಿದ್ದಾರೆ. ಬೀಜ,ಗೊಬ್ಬರ,ಔಷಧಿ, ನೀರು ಕೃಷಿ ಉಪಕರಣಗಳಿಗೆ ದುಬಾರಿ ಬೆಲೆ ತೆತ್ತು ಬೆಳೆದ ಬೆಳೆಗೆ ಖರ್ಚನ್ನು ನೀಗಿಸುವಷ್ಟು ಬೆಲೆ ಬಾರದಿದ್ದರೆ ಮತ್ತೆಲ್ಲಿಂದ ನಷ್ಟವನ್ನು ತುಂಬಿಸುವುದು. ಸರ್ಕಾರ ಎಷ್ಟೆ ಸಾಲ, ಸಬ್ಸಿಡಿ, ಸಹಾಯ ದನ ನೀಡಿದರೂ ಸ್ವಾವಲಂಬಿಯಾಗದ ರೈತ ಸಂಕಷ್ಟದಲ್ಲಿ ಸಿಕ್ಕಿ ಕೊಳ್ಳುತ್ತಾನೆ. ಈ ಸಂಕಷ್ಟದಿಂದ ಕಳೆದ ದಶಕದಲ್ಲಿ ದೇಶದಲ್ಲಿ ಎರಡು ಲಕ್ಷ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ನಮ್ಮ ಕೃಷಿ ಸಂಶೋಧನೆ, ಬೋಧನೆಯಲ್ಲಿ ತಪ್ಪು ಹೆಜ್ಜೆ ಇಟ್ಟಿದ್ದೇವನ್ನುವುದಕ್ಕೆ ಕೆಳಕಂಡ ಉದಾಹರಣೆ ಪುಷ್ಠಿ ಕೊಡುತ್ತದೆ. ಬ್ರಿಟಿಷರೆ ಕರೆತಂದ ಒಬ್ಬ ಹೆಸರಾಂತ ವಿಜ್ಞಾನಿ, ಡಾ|| ಆಲ್ಬರ್ಟ ಹೊವರ್ಡ್ 1905 ರಲ್ಲಿ **ಇಂಪೀರಿಯ ಅಗ್ರಿಕಲ್ಚರ್ ರೀಸರ್ಚ್ ಇನ್ಸ್ ಟ್ಯೂಟ್ ನ(IARI)** ಮುಖ್ಯಸ್ಥರಾಗಿ ನೇಮಕಗೊಂಡಿದ್ದರು. ಅಲ್ಲಿ ನಿರೂಪಿಸಿದ್ದ ಸಂಶೋಧನೆ ಸುತ್ತಮುತ್ತಲಿನ ರೈತರಿಗೆ ಅನುಕೂಲವಾಗುವಂತಿರಲಿಲ್ಲ. ದೇಶದ ರೈತರ ಸಮಸ್ಯೆಗೂ ಅಲ್ಲಿ ಆಗುತ್ತಿದ್ದ ಸಂಶೋಧನೆಗೂ ಸಂಭಂಧ ವಿರಲಿಲ್ಲ. ಜಮೀನಿನ ಫಲವತ್ತತೆ ವೃದ್ಧಿಸಿ,

ಉತ್ಪಾದಕತೆ, ಉತ್ಪತ್ತಿ ಹೆಚ್ಚಿಸುವ ತಂತ್ರ ಜ್ಞಾನದ ಕಡೆಗೆ ಗಮನ ಕೊಡುತ್ತಿರಲಿಲ್ಲ. ಇವೆಲ್ಲವನ್ನು ಸರಿಪಡಿಸಲು ಮಾಡಿದ ಇವರ ಪ್ರಯತ್ನ ಸಫಲವಾಗದಿದ್ದಾಗ ಇವರು ಪೂಸ ಇನ್ಸ್ ಟ್ಯೂಟ್ ಅನ್ನು ತೊರೆದು ಇಂದೋರ್ ನಲ್ಲಿ ಇವರದೆ ಆದ ಪ್ಲಾಂಟ್ ಇಂಡಸ್ಟ್ರೀಸ್ ಇನ್ಸ್ ಟ್ಯೂಟ್ ಅನ್ನು ತೆರೆದು ರೈತರ ಸಮಸ್ಯೆಗಳಿಗೆ ಸ್ಪಂದಿಸುವ ಸಂಶೋಧನೆ ಪ್ರಾರಂಭಿಸಿದರು. ಹಲವು ರಾಜ ಮಹಾರಾಜರು ಇವರ ಸಹಾಯಕ್ಕೆ ನಿಂತರು. ಇವರು ವೃದ್ಧಿ ಪಡಿಸಿದ ಇಂಡೋರ್ ಮೆಥೆಡ್ ಆಫ್ ಕಾಂಪೋಸ್ಟಿಂಗ್ ಇಂದಿಗೂ ದೇಶ ವಿದೇಶಗಳಲ್ಲಿ ಹೆಸರ್ ವಾಸಿಯಾಗಿದೆ. ಇವರು ಬರೆದ ಹಲವಾರು ಕೃತಿಗಳಲ್ಲಿ ಕ್ರಾಪ್ ಪ್ರೊಡಕ್ಷನ್ ಇನ್ ಇಂಡಿಯ **(Crop Production in India a Critical Survey of its Problems 1924) ಮತ್ತು ಎನ್ ಅಗ್ರಿ ಕಲ್ಚರಲ್ ಟೆಸ್ಟ್ ಮೆಂಟ್ (An Agricultural Testament 1940) ಇದು** ಭಾರತದ ಕೃಷಿ ಸಾಧನೆ-ಸವಾಲುಗಳ ಸರಳ ಉತ್ತರವಾಗಿದೆ, ಇವರನ್ನು ಸಾವಯವ ಕೃಷಿ ಪಿತಾಮಹ ನೆಂದು ಕರೆದಿದ್ದಾರೆ.

ದುರಾದೃಷ್ಟದಿಂದ ಇವರ ಸಂಶೋಧನೆ ಸಲಹೆಯನ್ನು ಸರ್ಕಾರ ಗಮನಕ್ಕೆ ತೆಗೆದು ಕೊಳ್ಳಲಿಲ್ಲ. ಇವರ ಪ್ರಬಂಧಗಳು ಪುಸ್ತಕಗಳು ಗ್ರಂಥಾಲಯಗಳಲ್ಲಿ ದೊರೆಯಲಿಲ್ಲ. ಕೃಷಿ ಕಾಲೇಜು ಗಳಲ್ಲಿ ಪಠ್ಯಕ್ರಮಕ್ಕೆ ಸೇರಲಿಲ್ಲ. **ಇಂಪೀರಿಯಲ್ ಅಗ್ರಿಕಲ್ಚರ್ ಇನ್ಸ್ ಟ್ಯೂಟ್ ನ್ನು ಇಂಡಿಯನ್ ಅಗ್ರಿಕಲ್ಚರ್ ಇನ್ಸ್ ಟ್ಯೂಟ್ ನ್ನಾಗಿ ಹೆಸರು ಬದಲಾಗಿಸಿದರೆ ವಿನಃ ಇಂಡಿಯನ್ ಅಗ್ರಿಕಲ್ಚರ್**ನ್ನು ಅಳವಡಿಸಲಿಲ್ಲ. ಬದಲಾಗಿ ಬ್ರಿಟಿಷ್ ಪಾರಂಪರ್ಯವನ್ನೇ ಮುಂದುವರಿಸಿದರು. ಅರವತ್ತರ ದಶಕದಲ್ಲಿ ಪ್ರಾರಂಭವಾದ **ಸ್ಟೇಟ್ ಅಗ್ರಿಕಲ್ಚರ್ ಯೂನಿವರ್ಸಿಟಿಗಳು ಕೂಡ ಐ.ಎ.ಆರ್.ಪಿ. ಮಾದರಿಯನ್ನೇ ಅನುಸರಿಸಿದವು.** ದೇಶದ ಹಸಿರು ಕ್ರಾಂತಿಗೆ ಇವೆ ಮೂಲವೆಂದು ಘೋಷಿಸಿದರು. ಹಸಿರು ಕ್ರಾಂತಿಯಮೂಲ, ಅಧಿಕ ಇಳುವರಿ ಬೀಜ, ರಸ ಗೊಬ್ಬರ, ರಸಾಯನಿಕ ಔಷಧಿ, ನೀರು, ಇವೆಲ್ಲಾವನ್ನು ಸಮರ್ಪಕವಾಗಿ ಬಳಸಲು ಅನುವಾದ ಕೃಷಿ ತಂತ್ರಜ್ಞರು. ಇದೊಂದು ಈ ಯುಗದ ಕೊಡಿಗೆ ಯೆಂದೇ ಹೇಳಬಹುದು. ಐವತ್ತರ ದಶಕದಲ್ಲಿದ್ದ ೫೦ ದಶಲಕ್ಷ ಟನ್ ಅಹಾರ ಉಅತ್ಪತ್ತಿಯನ್ನ್ ೨೨೦ ದಶಲಕ್ಷ ಟನ್ ಗೆ ಏರಿಸಿ ೧೦೦ ಕೋಟಿಗೂ ಅಧಿಕ ಇರುವ ಜನಸಂಖ್ಯೆಗೆ ಆಹಾರ ನೀಗಿಸಿರುವುದು ಸಾಮಾನ್ಯವಲ್ಲ. ಯಾವುದೇ ಪ್ರಗತಿಯು ಸಮಸ್ಯೆ ರಹಿತವಾಗುವುದಿಲ್ಲ.

ಹಸಿರು ಕ್ರಾಂತಿಯು ಅಹಾರ ಸಮಸ್ಯೆಯನ್ನು ಬಗೆಹರಿಸುವುದರೊಂದಿಗೆ ಹಲವಾರು ಸಮಸ್ಯೆಗಳನ್ನು ತಂದೊಡ್ಡಿತು. ಮುಖ್ಯವಾಗಿ ಇದೊಂದು ಸ್ವಸ್ಥಿರ ಕೃಷಿಯಾಗಲಿಲ್ಲ. ಹಸಿರು ಕ್ರಾಂತಿ ದೇಶದ ಖಣಜವನ್ನು ತುಂಬಿತೇ ಹೊರತು ರೈತರ ಸಮಸ್ಯೆಗೆ ಪರಿಹಾರ ವಾಗಲಿಲ್ಲ. ಮಣ್ಣು ಉತ್ಪಾದಕತೆಯನ್ನು ಕಳೆದುಕೊಂಡಿತು. ಆಹಾರ ಕಲುಷಿತಗೊಂಡು ಜನ ಜಾನುವಾರುಗಳ ಆರೋಗ್ಯಕ್ಕೆ ಕುಂದು ತಂದಿತು. ಕೃಷಿ ಒಂದು ಜೀವನ ಶೈಲಿಯಾಗಿದ್ದದ್ದು ವ್ಯಾಪಾರಿಕರಣ ವಾಗತೊಡಗಿತು, ಸಮಗ್ರ ಕೃಷಿ ಬದಲಿಗೆ ಏಕ ಬೆಳೆ ಪದ್ಧತಿ ಜಾರಿಗೆ ಬಂತು. ಕೃಷಿ ಹೈನುಗಾರಿಕೆ ಬೇರ್ಪಟ್ಟವು. ಸಗಣಿ ಸಾವಯವ ವಸ್ತು ಇಲ್ಲದ ಭೂಮಿ ಸೊರಗಿತು. ಶೇಕಡ ೭೫ ರಷ್ಟು ಮಳೆ ಆಧಾರಿತ ಕೃಷಿ ಭೂಮಿಗೂ ಹಸಿರು ಕ್ರಾಂತಿ ತತ್ವಗಳುಸ್ಪಂದಿಸಲಿಲ್ಲ. ಅತಿ ಹೆಚ್ಚು ಬಡತನ ರೇಖೆಯಲ್ಲಿರುವ ಜನ ಈ ಪ್ರದೇಶದವರು. ಇವೆಲ್ಲ ಸಮಸ್ಯೆಗಳಿಂದ ರೈತ ಕೃಷಿಯನ್ನೇ ತೊರೆಯುವ ಹಂತಕ್ಕೆ ಬಂದಿದ್ದಾನೆ.

ಇದಕ್ಕೆ ಪರಿಹಾರ ಇಲ್ಲವೆ. ಎಲ್ಲಾ ಸಮಸ್ಯೆಗಳಿಗೆ ಒಂದಲ್ಲ ಒಂದು ಪರಿಹಾರ ಇದ್ದೇ ಇದೆ. ಈಗಿರುವ ದುಸ್ಥಿತಿ ಕೃಷಿಗೂ ಪರಿಹಾರವಿದೆ. ಆದರೆ ಇದೊಂದು ಎರಡು ಕಡೆ ಜಗ್ಗಾಟದ ಹಗ್ಗವಿದ್ದಂತೆ. ಒಂದು ಕಡೆ ಸ್ಥಳೀಯ ಸಂಪನ್ಮೂಲ ಕ್ರೂಢೀಕರಿಸಿ ಸಮಗ್ರ ಬೇಸಾಯ ಮಾಡಿ ಸ್ವಾವಲಂಬನೆಯ ಸ್ವಾಭಿಮಾನದ ಪ್ರಯತ್ನ ಮಾಡುವರು. ಮತ್ತೊಂದೆಡೆ ಈಗಿರುವ ಪದ್ಧತಿಯನ್ನು ಬದಲಾಯಿಸಿದರೆ ದೇಶ ಆಹಾರ ಸಮಸ್ಯೆಯನ್ನು ಎದುರಿಸಲಿದೆ. ಢಂಬ ವಾದ: ಇದಕ್ಕೆ ಪೂರಕವಾಗಿ ಬೀಜ, ರಸಗೊಬ್ಬರ, ರಸಾಯನಿಕ ಔಷಧಿಗಳ ತಯಾರಕರ ಕುಮ್ಮಕ್ಕು. ಈ ಜಗ್ಗಾಟ ದಿಂದ ಜಯಸುವರು ಯಾರು? ಯಾವಾಗ? ಹೇಗೆ? ಇದೊಂದು ಸವಾಲು.

ರಾಜಾಸ್ಥಾನವನ್ನು ಬಿಟ್ಟರೆ ಕರ್ನಾಟಕವೇ ರಾಷ್ಟ್ರದಲ್ಲಿ ಅತೀ ಹೆಚ್ಚು ಒಣ ಭೂಮಿಯನ್ನು ಹೊಂದಿರುವ ಪ್ರದೇಶ.ಕರ್ನಾಟಕಕ್ಕೆ ಕೃಷಿ ಸಮಸ್ಯೆ ಮೊದಲಿಂದಲೂ ಕಾಡುತ್ತಿದೆ. ಮುಖ್ಯವಾಗಿ ಬಹುತೇಕ ಕೃಷಿ ಮಳೆ ಆಧಾರಿತ. ಇದನ್ನು ಸಮರ್ಪಕವಾಗಿ ಬಳಸಿ ಬೇಸಾಯ ಮಾಡುವ ಹಾದಿಯನ್ನು ಕಂಡು ಕೊಳ್ಳಲು ಶತಮಾನದ ಹಿಂದೆಯೇ ಸಂಶೋಧನೆ ಪ್ರಾರಂಭವಾಯಿತು. ಅಂದಿನ ಮೈಸೂರು ಅರಸು ಮನೆತನದವರು ಹಲವಾರು ವಿದೇಶಿ ನಿಪುಣರನ್ನು ಕರೆತಂದು ಕೃಷಿ ಸಂಶೋಧನೆಯನ್ನು ಪ್ರಾರಂಭಿಸಿದರು. ರಸಾಯನಿಕ ಶಾಸ್ತ್ರ ತಜ್ಞ ಜರ್ಮನ್ ದೇಶದವರಾದ ಡಾ. ಲ್ಲೇಮನ್ 1899 ರಲ್ಲಿ ನೇಮಕ ಗೊಂಡು 1901 ರಲ್ಲಿ ಕೃಷಿ ರೀಸರ್ಚ್

ಫಾರ್ಮ್ ನ್ನು ಹೆಬ್ಬಾಳದಲ್ಲಿ ಪ್ರಾರಂಭಿಸಿದರು. ಇವರು ಸಂಶೋಧನೆ/ವಾರ್ಷಿಕವರದಿಯನ್ನು ಕನ್ನಡದಲ್ಲೇ ಬರೆದು ಸರ್ಕಾರಕ್ಕೆ ಸಲ್ಲಿಸುತ್ತಿದ್ದರು. ಕೃಷಿ ಇಲಾಖೆಯ ಮತ್ತೊಂದು ಮೈಲಿಗಲ್ಲು 1905 ರಲ್ಲಿ ಕೆನಡಾ ದೇಶಿಯ ಡಾ. ಲೆಸ್ಲಿ ಸಿ.ಕೋಲ್ ಮನ್ ನೇಮಕಗೊಂಡದ್ದು ಇವರು ಕೃಷಿ ಇಲಾಖೆಯ ಪ್ರಥಮ ನಿರ್ದೇಶಕರಾಗಿ 1912 ರಲ್ಲಿ ನೇಮಕ ಗೊಂಡು 1913 ರಲ್ಲಿ ಹೆಬ್ಬಾಳದಲ್ಲಿ ಕೃಷಿ ಪಾಠಶಾಲೆ ಪ್ರಾರಂಭಿಸಿದರು. ಮುಂದೆ 1946 ರಲ್ಲಿ ಕೃಷಿ ಕಾಲೇಜು 1964 ರಲ್ಲಿ ಕೃ.ವಿ.ವಿ. ಇಲ್ಲಿಂದಲೇ ಪ್ರಾರಂಭ. ಮುಂದಿನದ್ದು ಎಲ್ಲರಿಗೂ ತಿಳಿದಿರುವ ವಿಷಯ. ಅಡಿಕೆ ಕೊಳೆ ರೋಗ ನಿಯಂತ್ರಿಸುವಲ್ಲಿ ಮಾಡಿದ ಇವರ ಸಾಧನೆ ಇಂದಿಗೂ ಪ್ರಸ್ತುತ.

ಒಣ ಭೂಮಿ ಬೇಸಾಯದ ಸಂಶೋಧನೆಗೆ ಬಿಜಾಪುರ ದ ಸೊಲ್ಲಾಪುರ ದಲ್ಲಿ (1933), ಬಳ್ಳಾರಿ ಜಿಲ್ಲೆಯ ಹಗರಿಯಲ್ಲಿ (1934), ಹೈದರಾಬಾದ್ ಪ್ರದೇಶವಾಗಿದ್ದ ರಾಯಚೂರಿನಲ್ಲಿ(1934), ರೀಸರ್ಚ್ ಫಾರಂ ಗಳನ್ನು ತೆರೆಯಲಾಯಿತು ಇಲ್ಲಿ ಸಂಶೋಧಿಸಿದ ಏಳೆಂಟು ವರ್ಷಗಳ ಫಲಿತಾಂಶಗಳನ್ನು ಕ್ರೋಢೀಕರಿಸಿ ಒಂದು ಸಮಗ್ರ ಒಣ ಬೇಸಾಯ ಕ್ರಮವನ್ನು (1944)ರಲ್ಲಿ ಜಾರಿಗೆ ತಂದರು.ಮುಖ್ಯವಾದ ಶಿಫಾರಸ್ಸುಗಳಲ್ಲಿ

(1)ಕಾಂಟೂರ್ ಬಂಡಿಂಗ್ (2) ಭೂಮಿಯನ್ನು ಸಮತಟ್ಟಾಗಿ ಮಾಡಿ ಟೆರೇಸ್ ಪ್ಲಾಟು ಗಳನ್ನಾಗಿ ಪರಿವರ್ತಿಸುವುದು (3) ಮಳೆ ನೀರು ಇಂಗುವುದಕ್ಕೆ ಸಕಾಲದಲ್ಲಿ ಉಳುಮೆ ಮಾಡುವುದು (4) ಸಾಕಷ್ಟು ಸಾವಯವ ಗೊಬ್ಬರ, ಕೊಟ್ಟಿಗೆ ಗೊಬ್ಬರ, ಹಸಿರೆಲೆ ಗೊಬ್ಬರ ಬಳಸುವುದು(5)ಪೈರಿಂದ ಪೈರಿಗೆ, ಸಾಲಿಂದ ಸಾಲಿಗೆ ಸಾಕಷ್ಟು ಜಾಗ ಬಿಡುವುದು ಹಾಗೂ ತೆಳುವಾಗಿ ನೆಡುವುದು ಬಿತ್ತುವುದು (6)ಬೆಳೆ ಪರಿವರ್ತನೆ (7) ಇಳಿಜಾರು ಅಡ್ಡಲಾಗಿ ಬದು ನಿರ್ಮಿಸುವುದು(8) ಆಹಾರ ಧಾನ್ಯದ ನಾಲ್ಕಾರು ಸಾಲುಗಳ ಮದ್ಯೆ ದ್ವಿದಳ ಧಾನ್ಯ ಗಳನ್ನು ಬೆಳೆಯುವುದು(9)ಹೈನುಗಾರಿಕೆ ಕೃಷಿ ಅವಿಭಾಜ್ಯ ಅಂಗವಾಗಿ ಪರಿಗಣಿಸುವುದು, ಮುಖ್ಯವಾದುವು. ಇದರ ಫಲವಾಗಿ ಒಣ ಭೂಮಿ ಪ್ರದೇಶದ ಇಳುವರಿ ಶೇಕಡ 50-70 ರವರೆಗೆ ಹೆಚ್ಚಿತು. ಈ ಶಿಫಾರಸ್ಸುಗಳು 1950 ರವರೆಗೆ ಜಾರಿಯಲ್ಲಿದ್ದವು. ಇಂದಿಗೂ, ಸಮಗ್ರ ಕೃಷಿಯಲ್ಲಿ ಇವು ಬಹುಮುಖ್ಯ ಅಂಶಗಳು.

ಕಳೆದ ಶತಮಾನದ ಎಂಬತ್ತು ತೊಂಬತ್ತರ ದಶಕದಲ್ಲಿ ಕಂಡ ಹಸಿರು ಕ್ರಾಂತಿಯ ಹಿನ್ನೆಡೆಯಿಂದ ಅಘಾತ ಗೊಂಡ ಭಾರತ ಸರ್ಕಾರ, 2000 ಇಸವಿಯಲ್ಲಿ ತಜ್ಞರ ಒಂದು ಟಾಸ್ಕ್ ಪೋರ್ಸ್ ನೇಮಿಸಿ, ಸದ್ಯದ ಪರಿಸ್ಥಿತಿಯ ಸಾದಕ ಬಾದಕಗಳನ್ನು ಗುರುತಿಸಿ ಮುಂದೆ ರೂಪಿಸಬೇಕಾದ ಕೃಷಿ ಯೋಜನೆಯನ್ನು ಸಲಹೆಯನ್ನು ಕೊಡಬೇಕೆಂದು ಕೇಳಿಕೊಂಡಿತು. ಈ ಸಮಿತಿ ಶಿಫಾರಸ್ಸು ಮಾಡಿದ್ದರಲ್ಲಿ ಪರ್ಯಾಯ ಕೃಷಿ "ಸಾವಯವ ಕೃಷಿ", ಹಸಿರು ಕ್ರಾಂತಿಯಿಂದ ಉದ್ಭವಿಸಿರುವ ಹಲವಾರು ಸಮಸ್ಯೆಗಳಿಗೆ ಪರಿಹಾರ ದೊರೆಯುವುದೆಂದು, ಇದು ಕನಿಷ್ಟ ಖರ್ಚಿನದಾಗಿದ್ದು ಸ್ಥಳೀಯ ಸಂಪನ್ಮೂಲಗಳನ್ನು ಕ್ರೂಢೀಕರಿಸಿ, ಮಣ್ಣಿನ ಫಲವತ್ತತೆ ಹೆಚ್ಚಿಸಿ, ಪರಿಸರಕ್ಕೆ ಸ್ಪಂದಿಸಿ, ಜೀವ ಜಂತುಗಳಿಗೆ ಹಾನಿಯಾಗದ ಪರಿಸರಪ್ರಿಯವಾದ ,ಸುಸ್ಥಿರ ಕೃಷಿಯನ್ನು ಅವಲಂಬಿಸಬೇಕೆಂದು ಸಲಹೆ ನೀಡಿತು. ಇದೆ ನ್ಯಾಷನಲ್ ಪ್ರೊಗ್ರಾಂ ಫಾರ್ ಆರ್ಗಾನಿಕ್ ಪ್ರೊಡಕ್ಷನ್ (NPOP) .

ಕೇಂದ್ರ ಸರ್ಕಾರ ಹತ್ತನೇ ಪಂಚವಾರ್ಷಿಕ ಯೋಜಯೆ ಅಡಿಯಲ್ಲಿ ಒಂದು ನೂರು ಕೋಟಿ ರೂಗಳನ್ನು ಸಾವಯವ ಕೃಷಿ ಉತ್ತೇಜಿಸಲು ಮಾಡಿತು. ಇದರ ಪ್ರಯುಕ್ತ ಒಂದು ಕೇಂದ್ರ ನ್ಯಾಷನಲ್ ಸೆಂಟರ್ ಫಾರ್ ಆರ್ಗಾನಿಕ್ ಫಾರ್ಮಿಂಗ್ ಹಾಗೂ ಬೆಂಗಳೂರು ಸೇರಿದಂತೆ ಐದು ವಲಯ ಕೇಂದ್ರಗಳನ್ನು ತೆರೆಯಲಾಗಿದೆ. ಆದರೆ ಮುಂದೆ ಹನ್ನೊಂದನೆಯ ಪಂಚವಾರ್ಷಿಕ ಯೋಜನೆಯಲ್ಲಿ 2½ ಸಾವಿರ ಕೋಟಿಯನ್ನು ಸಾವಯವ ಕೃಷಿಗೆ ಮೀಸಲಾಗಿ ಇಡುವ ವಾಗ್ದಾನ ಇಂದಿಗೂ ಪೂರೈಸಿಲ್ಲ. ಅಂದರೆ ಪಂಚವಾರ್ಷಿಕ ಯೋಜನೆ ಇನ್ನೊಂದು ವರ್ಷದಲ್ಲಿ ಮುಕ್ತಾಯವಾಗುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಧೋರಣೆಯನ್ನು ಗಮನಿಸಬಹುದು. ಜಾಗತೀಕರಣ, ಖಾಸಗೀಕರಣ,ಕೃಷಿ ಔದ್ಯೋಗೀಕರಣಕ್ಕೆ ಇನ್ನೂ ಹೆಚ್ಚಿನ ಒಲವು ಇರುವಂತೆ ತೋರುತ್ತದೆ.ದೇಶದ ರೈತರ ಹಿತ ದೃಷ್ಟಿ ಹಿನ್ನೆಡೆ ಮುಂದುವರಿಯುತ್ತಲೇ ಇದೆ.

ಸ್ವಯಂಪ್ರೇರಿತ ರೈತರು,ಕೆಲವು ಸಂಘ ಸಂಸ್ಥೆಗಳು ಸ್ವಸ್ಥಿರ ಕೃಷಿಗೆ ಉತ್ತೇಜನ ನೀಡುತ್ತಿದೆ. ಸಾವಯವ ಕೃಷಿ ಉತ್ತೇಜಕ ಸಂಘ(APOF)ದೇಶದಲ್ಲೇ ಮೊದಲಿಗೆ ಸಾವಯವ ಕೃಷಿಗೆ ಮೀಸಲಾದ ಸಂಸ್ಥೆ 1996 ರಲ್ಲಿ ಪ್ರಾರಂಭವಾಗಿ ಸಾವಯವ ಕೃಷಿಗೆ ಒತ್ತು ನೀಡುತ್ತಾ ಬಂದಿದೆ. ಇದು 1997ರಲ್ಲಿ ಆಯೋಜಿಸಿದ್ದ ಮೊಟ್ಟ ಮೊದಲ ರಾಷ್ಟ್ರೀಯ ಸೆಮಿನಾರ್

ಸಾವಯವ ಕೃಷಿಯ ಬಗ್ಗೆ ಅರಿವು ಮೂಡಿಸುವುದಲ್ಲಿ ಯಶಸ್ವಿಯಾಗಿದೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು,~~ಕೇಂದ್ರ~~ ಕೆಲವು ಸಂಘ ಸಂಸ್ಥೆಗಳು ಸಾವಯವ ಕೃಷಿ ಬಗ್ಗೆ ಚಿಂತನೆ ಮಾಡುವುದಕ್ಕೆ ನಾಂದಿಯಾಯಿತು.

ಕರ್ನಾಟಕ ಸರ್ಕಾರ ಸಾವಯವ ಕೃಷಿ ಬಗ್ಗೆ ದಿಟ್ಟ ಹೆಜ್ಜೆ ಇಟ್ಟಿದೆ. ಸಾವಯವ ಕೃಷಿ ನೀತಿಯನ್ನು 2004 ರಲ್ಲಿ ಜಾರಿಗೊಳಿಸಿ ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ಸಾವಯವ ಗ್ರಾಮಯೋಜನೆಗಳನ್ನು ಪ್ರಾರಂಭಿಸಿತು. ಕಳೆದ ಎರಡು ವರುಷದ ಆಯವ್ಯಯದಲ್ಲಿ ತಲಾ ನೂರು ಕೋಟಿ ರೂ. ಗಳನ್ನು ಸಾವಯವ ಕೃಷಿಗೆ ತೆಗೆದಿಟ್ಟು ಸಾವಯವ ಕೃಷಿ ಮಿಷನ್ ಮೂಲಕ ಗುರಿ ಮುಟ್ಟುವ ಯೋಜನೆಯನ್ನು ಹಮ್ಮಿಕ್ಕೊಳ್ಳಲಾಗಿದೆ. ಮತ್ತಾವ ರಾಜ್ಯ ಸರ್ಕಾರಗಳು ಇಷ್ಟು ಮೊತ್ತದ ಹಣವನ್ನು ಸಾವಯವ ಕೃಷಿಗೆ ಖರ್ಚು ಮಾಡುತ್ತಿರುವ ನಿದರ್ಶನವಿಲ್ಲ. ಹಣ ಹೂಡಿಕೆ ಮಾಡುವುದು ಒಂದು ಹಂತ. ಅದನ್ನು ಸಮರ್ಪಕವಾಗಿ ಬಳಸಿ ಗುರಿ ಮುಟ್ಟುವುದು ಎರಡನೆ ಹಂತ. ಮಧ್ಯಂತರ ಸಮೀಕ್ಷೆ ಮಾಡಿ ಕೆಲವು ಲೋಪ ದೋಷಗಳನ್ನು ಸರಿಪಡಿಸಿ ಮಾರ್ಗಸೂಚಿಯನ್ನು ನಿರೂಪಿಸುವ ವ್ಯವಸ್ಥೆ ಇಲ್ಲದಿದ್ದರೆ ಬಯಸಿದ ಫಲ ದೊರೆಯುವುದು ದುರ್ಲಭ. ಪ್ರತಿ ತಾಲ್ಲೂಕಿನಲ್ಲಿ 500 ರೈತರಿಗೆ ಇದರ ಪ್ರಯೋಜನ ದೊರೆಯುವಂತೆ ಯೋಜಿಸಲಾಗಿದೆ. ಅವರಲ್ಲಿ ಎಷ್ಟು ರೈತರು ಸಾಲದ ಸಂಕಲೆಯಿಂದ ಬಿಡಿಸಿ ಕೊಳ್ಳುವರು, ಅವರ ಜಮೀನಿನ ಫಲವತ್ತತೆ ಎಷ್ಟುವೃದ್ಧಿಯಾಯಿತು,ಉತ್ಪಾದಕತೆ ಉತ್ಪತ್ತಿ ಎಷ್ಟು ಹೆಚ್ಚಾಗಿದೆ, ಸಮಗ್ರ ಕೃಷಿಯತ್ತ ಸಾಗಿರುವನೆ, ಬಹುತೇಕ ಅವನ ಅಗತ್ಯಕ್ಕೆ ಅವನ ಜಮೀನಲ್ಲೇ ಪಡೆಯಲು ಸಾಧ್ಯವಾಯಿತೆ ಮುಂತಾದವುಗಳತ್ತ ಗಮನ ಹರಿಸದಿದ್ದರೆ ಕಳೆದ ಅರ್ಧ ಶತಮಾನದಲ್ಲಿ ರೈತರಿಗಾಗಿ ಮಾಡಿದ ಖರ್ಚಿನಂತೆ ಇದೂ ಖರ್ಚಾಗುವುದು.

ಸಾವಯವ ಕೃಷಿ ಹಸಿರು ಕ್ರಾಂತಿಯಂತೆ ಕ್ರಾಂತಿಕಾರಿಯಲ್ಲ (Revolution). ಇದೊಂದು ವಿಕಸನದ ಹಾದಿ (Evolution)ಆದರೆ ಕೃಷಿಯ ಮತ್ತು ಕೃಷಿಕನ ಸಮಸ್ಯೆಗಳಿಗೆ ನಿರ್ದಿಷ್ಟ ಉತ್ತರ ಹುಡುಕುವ ಪ್ರಯತ್ನ. ಇದು ನಿಂತ ನೀರಲ್ಲ, ನಿರಂತರ ಹರಿಯುವ ಹೊಳೆಯಂತೆ, ಎದರು ತೊಡರುಗಳನ್ನು ಬಳಸಿ, ಸುತ್ತಿ ಮುಂದೆ ಸಾಗುವಂತಹುದು. ರೈತನ ನೆಮ್ಮದಿಗೆ ಇದೊಂದು ದಾರಿ ದೀಪ.

ನಾವು ಇತ್ತೀಚಿಗೆ ಕೈ ಗೊಂಡ ಒಂದು ಪೈಲೆಟ್ ಪ್ರಾಜೆಕ್ಟ್ "ಪಾರ್ಮರ್ಸಫೀಲ್ಡ್ ಸ್ಕೂಲ್ ಇನ್ ಆರ್ಗಾನಿಕ್ ಫಾರ್ಮಿಂಗನಲ್ಲಿ ರೈತರನ್ನು ಸಂಘಟಿಸಿ ಸ್ವಯಂಪ್ರೇರಿತ, ಸ್ವಾವಲಂಬಿಗಳನ್ನಾಗಿ ಮಾಡುವಲ್ಲಿ ಯಶಸ್ಸನ್ನು ಕಂಡಿದ್ದೇವೆ. ಇದಕ್ಕೆ ನುರಿತ ಕ್ಷೇತ್ರ ತಜ್ಞರು ಬೇಕು. ರೈತರನ್ನು ದೂರದ ಸ್ಕೂಲು ಕಾಲೇಜಿಗೆ ಕರೆತಂದು ಕಲಿಸುವುದಕ್ಕಿಂತ ಅವರಿರುವಲ್ಲಿಗೆ ಸ್ಕೂಲನ್ನು ವಿಸ್ತರಿಸುವುದು. ನಾಲ್ಕೈದು ಕಿ.ಮಿ. ಪಾರ್ಶ್ವದಲ್ಲಿರುವ ರೈತರನ್ನು ಒಂದಡೆ ಸೇರಿಸಿ ಪ್ರತಿ ಸೋಮವಾರ ಕೃಷಿಗೆ ಸಂಬಂಧಪಟ್ಟ ವಿಷಯಗಳನ್ನು ತಜ್ಞರಿಂದ ಪ್ರವಚನ ಮಾಡಿಸಿ ವಾರದ ಉಳಿದ ದಿನಗಳಲ್ಲಿ ಅವರವರ ಜಮೀನಿನಲ್ಲೇ ಅವರಿಂದಲೇ ಪ್ರಯೋಗಗಳನ್ನು ಮಾಡಿಸುವುದು ಇದಕ್ಕೆ ಕೃಷಿ ಸಹಾಯಕನ ಸಹಾಯಬೇಕು. ಮೂರು ತಿಂಗಳ ಅವಧಿಯ ಈ ಶಾಲೆಯಲ್ಲಿ ಕಲಿತ ರೈತರು ಬೇರೆ ರೈತರಿಗೆ ತರಬೇತಿ ಕೊಡಲು ಶಕ್ಯರಾಗುವರು.

ನಮ್ಮ ದೇಶದ ಆರು ಲಕ್ಷ ಹಳ್ಳಿಗಳಿಗೆ ಕಾಲೇಜಿನಿಂದ ಕಲಿತ ವಿಸ್ತರಣ ಸಿಬ್ಬಂದಿಯನ್ನು ಒದಗಿಸುವುದು ದುರ್ಲಬ, ಅವರು ಹಳ್ಳಿಯಲ್ಲೆ ಹೋಗಿ ರೈತರೊಡನೆ ವಾಸ ಮಾಡುವುದಂತು ಸದ್ಯದ ಪರಿಸ್ಥಿತಿಯಲ್ಲಿ ಆಗದ ಮಾತು. ಇದಕ್ಕೆ ಬದಲಾಗಿ ಹಳ್ಳಿಯಲ್ಲಿಯೆ ದೊರೆಯುವ ವಿದ್ಯಾವಂತರನ್ನು ತರಬೇತಿ ಮಾಡಿ ಅವರನ್ನು ಸುತ್ತಮುತ್ತ ಹಳ್ಳಿಯವರಿಗೆ ಮಾರ್ಗದರ್ಶಿಗಳನ್ನಾಗಿ ನೇಮಕ ಮಾಡಬಹುದು. ಇದಕ್ಕಾಗಿ ಹೆಚ್ಚಿನ ಖರ್ಚು ಬರುವುದಿಲ್ಲ ಆದರೆ ಇಷ್ಟರವರೆಗೆ ಸಲಹೆ,ಸಹಾಯ, ಸಹಕಾರ ದೊರೆಯದಿದ್ದ ರೈತರಿಗೆ ರೈತರಿಂದಲೆ ದೊರೆಯುವುದಾದರೆ (Reaching the unreached) ಇದಕ್ಕಿಂತ ಉತ್ತಮವಾದ ರೈತರನ್ನು ಉದ್ಧರಿಸುವ ಮಾರ್ಗ ಬೇರೆ ಇರದು.

ಸರ್ಕಾರ ಕೃಷಿಯಲ್ಲಿ ಸರ್ಟಿಫಿಕೇಟ್ ಕೋರ್ಸ್ ಕೊಡುವ ಉದ್ದೇಶ ಇದಕ್ಕೆ ಪೂರಕವಾಗ ಬಹುದು. ಕೆಲವು ಜಿಲ್ಲೆ, ತಾಲ್ಲೂಕುಗಳಲ್ಲಿ ಪ್ರಾಯೋಗಿಕವಾಗಿ ಇಂತಹ ಸ್ಕೂಲುಗಳನ್ನು ಏರ್ಪಡಿಸಿದರೆ ಇದರಿಂದ ಕಲಿತ ಅನುಭವದಿಂದ ಬೇರೆ ಕಡೆ ವಿಸ್ತರಿಸಬಹುದು. ನಮ್ಮ ಕೃಷಿ ಹಿನ್ನಡೆಗೆ ಕೃಷಿ ವಿಸ್ತರಣಾ ಸಿಬ್ಬಂದಿಯವರ ಕೊರತೆ ಮುಖ್ಯಕಾರಣ. ರೈತರಿಗೆಂದು ಕೊಡುವ ಎಲ್ಲಾ ಸವಲತ್ತುಗಳನ್ನು ಕ್ರೋಢೀಕರಿಸಿ **"ಏಕಗವಾಕ್ಷಿ"** ರೂಪದಲ್ಲಿ ಮಿಷನ್ ಮೋಡ್ ಮಾದರಿಯಲ್ಲಿ ನಾಲ್ಕೈದು ವರುಷದಲ್ಲಿ ಎಲ್ಲಾ ರೈತರನ್ನು ತಲುಪುವ ಯೋಜನೆ ಹಾಕಿ ಕೊಂಡರೆ ಕೃಷಿಯಲ್ಲಿ ಬಯಸಿದ ಸಾಧನೆಯನ್ನು ಶ್ರೀಘ್ರ ತಲಪಬಹುದು. ಇದೊಂದು ಸವಾಲಾಗಿ ಸ್ವೀಕರಿಸುವ ದೃಢಸಂಕಲ್ಪವನ್ನು ಸಂಬಂಧ ಪಟ್ಟವರು ಮಾಡಬೇಕು.

[illegible] - HM

Vijayapure High School